

# ಕೆರಯಂಗಳದ ಜೀವ ವೈವಿಧ್ಯ

ಜಲ ಜೀವನಾಧಾರ. ವಿಜ್ಞಾನಿಗಳು ಬೇರೆ ಗ್ರಹಗಳಲ್ಲಿ ಜೀವಿಗಳಿವಿಯೇ ಎಂದು ಹುಡುಕಲು ಹೊರಟಾಗ ಮೊದಲು ಹುಡುಕುವುದೇ ನೀರನ್ನು. ನೀರಿರುವುದರಿಂದ ಭೂಗೋಳ ಜೀವ ಗೋಳವಾಗಿರುವುದು. ದಾವಣಗೆರೆಯ ಹದಡಿ ಕೆರೆಯಲ್ಲಿನ ನೀರು ಸ್ವಲ್ಪ ಕಡಿಮೆಯಾಗುತ್ತಿದ್ದಂತೆ ಒಂದು ಜೈವಿಕ ಲೋಕವೇ ಅನಾವರಣಗೊಳ್ಳುತ್ತದೆ.

ಸ್ವಲ್ಪ ನೀರಿರುವ ಜಾಗದ ಸುತ್ತ ಬೆಳೆಯುವ ಹುಲ್ಲು ಮತ್ತು ಜೊಂಡು ಸಸ್ಯಗಳು. ಅವುಗಳ ನಡುವೆ ಇರುವ ಕೀಟಗಳು. ಕೆಸರಿನಲ್ಲಿರುವ ಹುಳುಗಳು. ನೀರು ಕಡಿಮೆಯಾದೊಡನೆ ಸುಲಭವಾಗಿ ಸಿಗುವ ಮೀನುಗಳು. ಇವೆಲ್ಲವನ್ನು ಮುಕ್ಕಲು ಬರುವ ಆಕರ್ಷಕ ಹಕ್ಕಿಗಳು. ಚಿತ್ರದಲ್ಲಿ ಕಾಣುತ್ತಿರುವುದು ಸ್ಥಳೀಯವಾಗಿರುವ ನೇರಳೆ ಜಂಬುಕೋಳಿಗಳು, ಚುಕ್ಕೆ ಕೊಕ್ಕಿನ ಬಾತುಗಳು, ಬಾಯ್ಕಳಕಗಳು, ಮರಗಾಲು ಹಕ್ಕಿಗಳು, ಅಲ್ಲದೆ ಯೂರೋಪಿನಿಂದ ಚಳಿಗಾಲಕ್ಕೆ ವಲಸೆ ಬರುವ ಕಂದು ಬಾತುಗಳು, ಗುಂಪಾಗಿ ನಿಂತಿರುವ ಸಣ್ಣ ಕಡಲಉಲ್ಲಂಕಿ ಮುಂತಾದವು, ನೀರು ಕಾಗೆಯ ಜೊತೆಗೆ ಸಂವಾದ ನಡೆಸುತ್ತಿವೆ. ಜೊತೆಗೆ ಕಣ್ಣಿಗೆ ಕಾಣದ ಸೂಕ್ಷ್ಮಜೀವಿಗಳು. ದೇಶಿ–ವಿದೇಶಿ ಜೀವಿಗಳಿಂದಾದ ಆಹಾರ ಸರಪಳಿಯ ಪ್ರತಿಯೊಂದು ಕೊಂಡಿಯ ಸ್ಪಷ್ಟ ಉದಾಹರಣೆ ಇಲ್ಲಿ ಲಭ್ಯ. ಇಂತಹ ಅದ್ಭುತ ದೃಶ್ಯಕಾವ್ಯವನ್ನು ಅನುಭವಿಸಲು ಸಂವೇದನಾಶೀಲತೆ ಅವಶ್ಯಕ. ವಿವಿಧ ಪ್ರಭೇದಗಳ ಸಾಮರಸ್ಯದ ಜೀವನದ ಮನುಜನಿಗೆ ಜಾತ್ಯತೀತದ ಪಾಠದಂತಿದೆ.

—ಡಾ. ಎಸ್. ಶಿಶುಪಾಲ, ದಾವಣಗೆರೆ



# ವಸಂತ ಬಿಡಿಸಿದ ದೃಶ್ಯ ಕಾವ್ಯ

ಸಂಕ್ರಮಣ ಸರಿದು, ಆಗಸದಲಿ ರವಿ ತನ್ನ ಪಥ ಬದಲಾಯಿಸಿದರೆ ಸಾಕು ಭುವಿಯೊಳು ಶೃಂಗಾರತೋಟವೊಂದು ಮೈದಳೆಯುತ್ತದೆ.

ಗಿಡಮರಗಳೆಲ್ಲ ಬಣ್ಣ ಬಣ್ಣದ ಚಿಗುರೆಲೆ–ಮೊಗ್ಗುಗಳನ್ನು ಮುಡಿಗೇರಿಸಿಕೊಂಡು ನವವಧುವಿನಂತೆ ಕಂಗೊಳಿಸುತ್ತಾ ವಸಂತಕಾಲವನ್ನು ಸ್ವಾಗತಿಸುತ್ತವೆ. ದುಂಬಿಗಳು–ಹಕ್ಕಿಗಳು ಹೂ–ಕಾಯಿಗಳಿಗೆ ಮುತ್ತಿಕೊಂಡು ಅಲ್ಲೊಂದು ಸಣ್ಣ ಸಂಗೀತ ಕಛೇರಿಯನ್ನೇ ತೆರೆದಿರುತ್ತವೆ.

ಬಹುತೇಕ ಗಿಡಮರಗಳು ಹೀಗೆ ತುಂಬಿ ತುಳುಕುವ ಮದುವೆ ಮನೆಗಳಂತೆ ಇರುತ್ತವೆ. ಆದರೆ ಇಲ್ಲೊಂದು ಮರ ವಸಂತನನ್ನು ಸ್ವಾಗತಿಸುವ ಅವಸರದಲ್ಲಿ ಎಲೆಗಳನ್ನೇ ಮರೆತು ಬಿಟ್ಟಂತಿದೆ. ಚಿತ್ರದಲ್ಲಿರುವ ಈ ಮರ ಹೊಂಬಣ್ಣದ ಹೂಗಳಿಂದ ಕಂಗೊಳಿಸುತ್ತದೆ ಆದರೆ ಇಡೀ ಮರದಲ್ಲಿ ಒಂದೇ ಒಂದು ಚಿಗುರೆಲೆಯೂ ಇಲ್ಲ. ತನ್ನ ಕಪ್ಪನೆಯ ಕಾಂಡ , ರೆಂಬೆ ಕೊಂಬೆಗಳ ಮೇಲೆ ಹೊಂಬಣ್ಣದ ಹೂಗಳನ್ನು ಅರಳಿಸಿಕೊಂಡು, ಕಡುನೀಲಿ ಆಗಸಕ್ಕೇರಿ ರವಿಗೆ ಮುಖಾಮುಖಿಯಾಗಬೇಕೆನ್ನುವಂತಿದೆ ಮರದ ಈ ಸೊಬಗು. ಪ್ರಕೃತಿ ಬಿಡಿಸುವ ಇಂತಹ ದೃಶ್ಯಕಾವ್ಯ ಕಲಾವಿದನನ್ನೂ ನಾಚಿಸುವಂತಿದೆ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ



# ಕಾರ್ಟೂನ್ ಲೋಕ

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯ ದಂಡಕಾರಣ್ಯ ಪ್ರದೇಶದಲ್ಲಿ ವಿಭಿನ್ನವಾದ ಕಾರ್ಟೂನ್ ಲೋಕ ನಿರ್ಮಾಣವಾಗಿದೆ.

ಅರಣ್ಯ ಇಲಾಖೆ ನಿರ್ಮಿಸಿರುವ ಉದ್ಯಾನವನದಲ್ಲಿ ನೂರಕ್ಕಿಂತಲೂ ಹೆಚ್ಚು ಕಾರ್ಟೂನ್ ಶಿಲ್ಪಗಳನ್ನು ನೋಡಬಹುದು ಪ್ರತಿದಿನ ಟೀವಿಯಲ್ಲಿ ನೋಡಿ ಸಂತೋಷ ಪಡುತ್ತಿದ್ದವರಿಗೆ ಈಗ ಕಾರ್ಟೂನ್ ಶಿಲ್ಪಗಳನ್ನು ನೋಡುವ ಅವಕಾಶ ದೊರೆತಿದೆ. ಈ ಕಾರ್ಟೂನ್ ಉದ್ಯಾನವನವು ದಾಂಡೇಲಿ ಬಸ್ ನಿಲ್ದಾಣದ ಹಿಂಭಾಗದಲ್ಲಿದೆ.

—ಬಳಕೂರು ವಿ.ಎಸ್. ನಾಯಕ